
B.L.D.E.ASSOCIATION'S
S. B. ARTS AND K. C. P. SCIENCE P.U. COLLEGE,
VIJAYAPUR – 586103.
ACCREDITED AT THE "A" LEVEL BY NAAC
Phone: (08352) – 261208, (08352) 262770 Extension. 2247
Fax: 08352 – 261766 E-mail: sbkcppu@gmail.com

Centenary Year 2010




# 2018-19

## ವಿಜಯ ಕರ್ನಾಟಕ ಪತ್ರಿಕೆ ಪ್ರಾಯೋಗಿಕ ಭೇಟಿ

ವಿಷಯ

# ನ್ಯೂಸ್ ಕೆಫೆ

ಬಿಸಿ ಬಿಸಿ ಸುದ್ದಿ ಸಂಭ್ರಮ



**ಮಾರ್ಗದರ್ಶಕರು**

ಶೃತಿ ಚಿನಗುಂಡಿ
ಮುಖ್ಯಸ್ಥರು
ಸಮೂಹ ಸಂವಹನ ಮತ್ತು
ಪತ್ರಿಕೋದ್ಯಮ ವಿಭಾಗ

**ವರದಿ ಸಿದ್ಧಪಡಿಸಿದ ವಿದ್ಯಾರ್ಥಿಗಳು**



ವಿಜಯಲಕ್ಷ್ಮೀ ಚೋಪಡೆ



ರಾಹುಲ್ ಗುದಿಗೆನ್ನವರ



ಪರಶುರಾಮ ಅಳಲದಿನ್ನಿ

Scanned with CamScanner

**B.L.D.E.A's**

**S.B Arts and K.C.P Science Vijayapur**

**Department of Journalism and Mass Communication**

**Project Report 2018-19**

**Subject: News Formats- Creative Articles, News Composing**

Journalism and Mass Communication Department Students, Vijayalaxmi Chopade, Rahul Guddigenevar and Parshuram Alaldinni were Visited the Vijyakarnataka Newspaper Office. However, there are different kinds of feature articles which have different editorial functions. So many more news formats are they like Sports, Political, Economical, Social, Weather, Local, National, International, film, Arts, Literature and cultural. Students known about the Text Composing Software's like, Nodi, Tunga, Bharaha, MS-word.

an article which explores issues that the news raises issues which cannot be analyzed and discussed within the format of a news story. Ideally, news features are meant to make the news better understood. Whereas a news story will answer the questions posed by the 5Ws and 1 H, the news feature goes beyond to show what it all means, what the significance behind events and developments are.

**BY LINED COLUMNS:** where the paper relies either on its star writers or on guest columnists to write opinion driven articles or very personalized pieces to break the monotony of the paper's own reportage or point of view. Bylined columns could be satirical or specialized in a technical way, dealing with issues such as medicine, the law, etc.

**IQAC, Co-ordinator**
S.B.Arts & K.C.P.Science College.
Vijayapur.

Head of Department
Journalism & Mass Communication
S.B.Arts & K.C.P Science College,
Vijayapur

Principal,
S.B. Arts and KCP Science College
VIJAYAPUR

Scanned with CamScanner

B.L.D.E.ASSOCIATION'S
S. B. ARTS AND K. C. P. SCIENCE COLLEGE,
SHRI B. M. PATIL ROAD (Solapur Road), VIJAYAPUR
ACCREDITED at 'A' Grade in 3rd Cycle by NAAC
Phone: (08352) – 261766, (08352) 262770 Extn. 2223, 2224
Fax: 08352 – 261766 E-mail: bldeasbkcp@gmail.com Web: www.bldeasbkcp.org

REF./ ಕ್ರಮಾಂಕ : ______ Date /ದಿನಾಂಕ: 15-2-2018

ಸ್ಥಾನಿಕ ಸಂಪಾದಕರು

ವಿಜಯ ಕರ್ನಾಟಕ

ವಿಜಯಪುರ.

ಮಾನ್ಯರೇ,

ವಿಷಯ: ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅಧ್ಯಯನಕ್ಕಾಗಿ ನಿಮ್ಮ ಕಚೇರಿಗೆ ಭೇಟಿ ನೀಡುವ ಅನುಮತಿ ಕೋರಿ.

ನಮ್ಮ ಮಹಾವಿದ್ಯಾಲಯದ ಬಿಎ ಪತ್ರಿಕೋದ್ಯಮ ಪದವಿ ತರಗತಿಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪ್ರಾಯೋಗಿಕ ಅನುಭವದ ಅಗತ್ಯವಿದೆ. ಹೀಗಾಗಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ನಿಮ್ಮ ಮಾಧ್ಯಮ ಕಚೇರಿಗೆ ಭೇಟಿ ನೀಡಲು ಉತ್ಸುಕರಾಗಿದ್ದಾರೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

ಡಾ.ಕೆ.ಜಿ.ಪೂಜಾರಿ
ಪ್ರಾಚಾರ್ಯರು

S.M. Chinagundi
ಶೃತಿ ಚಿನಗುಂಡಿ
ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ

VIJAY KARNATAKA
CTS NO. 413/B, WARD NO. 4
PREMASHRI TOWERS, 2nd FLOOR
M.G. ROAD, OPP. BSNL OFFICE
VIJAYPURA - 586101

PRINCIPAL
B.L.D.E.A's S.B. Arts & K.C.P. Science College, Vijayapur.

IQAC, Co-ordinator
S.B.Arts & K.C.P.Science College,
Vijayapur.

S.M. Chinagundi
Head of Department
Journalism & Mass Communication
S.B.Arts & K.C.P Science College
Vijayapur

Scanned with CamScanner

# ಮೊದಲ ಮಾತು

ಪತ್ರಿಕೋದ್ಯಮ ಸಾಗರ. ಮೊಗೆದಷ್ಟು ತೆರೆದುಕೊಳ್ಳುವ ವಿಶಾಲ ಜಗತ್ತು. ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಉತ್ತಮ ಸಮಾಜಕ್ಕಾಗಿ ಉಪಯುಕ್ತ ಮಾಹಿತಿ ನೀಡುವ ಸಾಧನ, ಮಾರ್ಗ. ಅಕ್ಷರದಲ್ಲೇ ಹೊಸ ಲೋಕ ಸೃಷ್ಟಿಸುವ, ಪರಿಚಯಿಸುವ ಅಮೋಘ ವಿಸ್ಮಯ.
ಸಮ ಸಮಾಜಕ್ಕೆ ದೃಶ್ಯ, ಮುದ್ರಣ, ಬಾನುಲಿ, ಅಂತರ್ಜಾಲ ತಮ್ಮದೇಯಾದ ವಿಶಿಷ್ಟ ಕೊಡುಗೆ ನೀಡುತ್ತಿವೆ. ಮಂಗಳೂರು ಸಮಾಚಾರದಿಂದ ಹಿಡಿದು ಇಂದಿನ ನವರೂಪದ ಪತ್ರಿಕೆಗಳವರೆಗೂ ತನ್ನದೇಯಾದ ವೈಶಿಷ್ಟ್ಯವಿದೆ. ತಂತ್ರಜ್ಞಾನ ಬೆಳೆದಂತೆಲ್ಲ ಪತ್ರಿಕೋದ್ಯಮವೂ ಮಗ್ಗಲು ಬದಲಿದೆ. ಉದ್ಯಮ ರೂಪ ಪಡೆದಿದೆ ಎಂಬ ಆರೋಪದ ಇದ್ದಿದ್ದೆಯಾದರೂ ನೇರ, ನಿರ್ಭೀತ, ಸಕಾಲಕ್ಕೆ ಸರ್ಕಾರನ್ನು ಎಚ್ಚರಿಸುವ ಕಾಯಕ ನಡೆದೇ ಇದೆ. ಸುದ್ದಿ ನೀಡುವ ಶೈಲಿಯೂ ಬದಲಾಗಿದೆ. ಸುದ್ದಿ ನೋಡುವ ದೃಷ್ಟಿಕೋನವೂ ಅತ್ತಿತ್ತ ವಾಲಿದೆ. ಇಂಥ ಸಂದಿಗ್ಧ ಹಾಗೂ ಮುಂದುವರಿದ ಸಮಯದಲ್ಲಿ ಪತ್ರಿಕೋದ್ಯಮ ಅಧ್ಯಯನ ಕೂಡ ಬಹು ದೊಡ್ಡ ಸವಾಲು. ಇತರೆ ವಿಷಯಗಳಂತೆ ಕೇವಲ ಪುಸ್ತಕಗಳಲ್ಲಿನ ಧ್ಯಾಯಗಳನ್ನು ಓದಿ ಪರೀಕ್ಷೆ ಎದುರಿಸಿದರೆ ಮುಗಿಯಿತು ಎನ್ನುವ ಸದವಕಾಶ ಪತ್ರಿಕೋದ್ಯಮಕ್ಕೆ ಇಲ್ಲ. ನಾಲ್ಕು ಗೋಡೆಗಳ ನಡುವೆ ಕುಳಿತು ಓದು, ಪರೀಕ್ಷೆ ಬರೆಯುವುದರ ಜತೆಗೆ ಪ್ರಾಯೋಗಿಕ ತರಬೇತಿಯೂ ಅಷ್ಟೇ ಮುಖ್ಯ.
ವೃತ್ತಿಪರ ಪತ್ರಕರ್ತರಿಗೆ ಪತ್ರಿಕೋದ್ಯಮದ ಇತಿಹಾಸದ ಜತೆಗೆ ಸಮಕಾಲಿನ ಬದಲಾವಣೆ, ಮಾರುಕಟ್ಟೆಯಲ್ಲಿ ಆಗುತ್ತಿರುವ ಏರಿಳಿತ, ಸುದ್ದಿ ಬರವಣಿಗೆಯಲ್ಲಿನ ನವೀನತೆ, ಜಾಹೀರಾತಿನ ಕ್ರಿಯಾಶೀಲತೆ, ಪುಟ ವಿನ್ಯಾಸದ ಹೊಸ ರೂಪತೆ, ಛಾಯಾಚಿತ್ರಗಳ ಕಣ್ಮನ ಸೆಳೆತ, ಸುದ್ದಿ ಸಂಗ್ರಹದ ಸಮಸ್ಯೆ ಹಾಗೂ ಸವಾಲುಗಳ, ವರದಿಗಾರನ ಪ್ರಶ್ನಾರ್ಥಕ ಗೊಂದಲಗಳು. ಇವೆಲ್ಲವುಗಳನ್ನು ಮೀರಿ ಮುಂಜಾನೆ ಬಿಸಿ ಕಾಫಿ ಜತೆಗೆ ಮನೆಯ ಟೇಬಲ್ ಮೇಲೆ ಬಂದು ಬೀಳುವ ಬಿಸಿ ಬಿಸಿ ಸುದ್ದಿಗಳ ಹೂರಣ ನೋಡುವುದೇ ಅಚ್ಚರಿ.
ಈ ಎಲ್ಲ ಅಚ್ಚರಿ, ತವಕ, ವಿಸ್ಮಯ, ಹೊಸ ಜಗತ್ತಿನ ಪ್ರಾಯೋಗಿಕ ಅಧ್ಯಯನಕ್ಕೆ ನಮ್ಮ ವಿದ್ಯಾರ್ಥಿಗಳು ತೆರಳಿದ್ದು ವಿಜಯ ಕರ್ನಾಟಕ ಪತ್ರಿಕೆಯ ವಿಜಯಪುರ ಕಚೇರಿಗೆ. ಅಲ್ಲಿ ಪತ್ರಿಕಾ ಪ್ರಕಟಣೆಯಿಂದ ಹಿಡಿದು ಮುದ್ರಣವಾಗುವವರೆಗೂ ನಡೆಯುವ ಎಲ್ಲ ಪ್ರಕ್ರಿಯೆಗಳನ್ನು ಕಣ್ಣಾರೆ ಕಂಡು ಬೆರಗುಗೊಂಡ ಕ್ಷಣ ಅವಿಸ್ಮರಣೀಯ. ಪುಟವಿನ್ಯಾಸ, ಸಂಪಾದಕೀಯ, ವರದಿಗಾರಿಕೆ, ತಲೆಬರಹ, ಅಡಿಬರಹ ಸೇರಿದಂತೆ ಪತ್ರಿಕೋದ್ಯಮದ ವಿವಿಧ ಆಯಾಮುಗಳನ್ನು ಪ್ರಾಯೋಗಿಕವಾಗಿ ಕಲಿತದ್ದು ವಿಶೇಷ. ಅದೆಲ್ಲದಕ್ಕೂ ಅಕ್ಷರರೂಪ ನೀಡಿದ್ದಾರೆ.

– ಶೃತಿ ಚಿನಗುಂಡಿ
ಮುಖ್ಯಸ್ಥರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

Shruti Chingundi
Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಪಠ್ಯವಿಷಯ


- ಸುದ್ದಿಯ ಸುತ್ತಾಟ
- ಲೇಖನಗಳ ತಯಾರಿಕೆ
- ಸುದ್ದಿ ಸಂಪಾದನೆ

ಚಾಕಚಕ್ಯತೆ

Cont---

Scanned with CamScanner

# ಸುದ್ದಿಯ ಸುತ್ತಾಟ



ಅಡಿಬರಹ: ಪತ್ರಿಕೆಯಲ್ಲಿನ ಸುದ್ದಿಗಲನ್ನು ಸಂಪಾದಿಸುತ್ತಿರುವುದನ್ನು ತಿಳಿದು ಕೊಳ್ಳುತ್ತಿರುವುದು.

ಪತ್ರಿಕಾ ಮಾಧ್ಯಮವು ಕ್ರಿ.ಶ ೧೭೮೦ ಕಲ್ಕತ್ತಾ ದಲ್ಲಿ. ಪ್ರಾರಂಭವಾಯಿತು. ಭಾರತದ ಮೊದಲ ವರ್ತಮಾನ ಪತ್ರಿಕೆ "ದಿ ಬೆಂಗಾಲ್ ಗೆಜೆಟ್", ಕನ್ನಡದ ಮೊದಲ ಪತ್ರಿಕೆ "ಮಂಗಳೂರು ಸಮಾಚಾರ" ಇದನ್ನು ಹರ್ಮನ್ ಮೊಗಲಿಂಗ್ ಎಂಬ ಮಿಷನರಿ ಆರಂಭಿಸಿದರು, ೧೭೮೦ ರಲ್ಲಿ ಸಣ್ಣದಾಗಿ ಪ್ರಾರಂಭವಾದ ಪತ್ರಿಕೋದ್ಯಮ ಇಂದು ಹೆಮ್ಮರವಾಗಿ ಬೆಳೆದು ಬಂದಿದೆ.

Cont...

Scanned with CamScanner

[illegible] [illegible]
ಮತ್ತು ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರ ಜೊತೆ [illegible]
ಅವರು ಪತ್ರಿಕೋದ್ಯಮದ ವಿಭಾಗದ ವಿದ್ಯಾರ್ಥಿಗಳನ್ನು [illegible]
"ಸಂಯುಕ್ತ ಕರ್ನಾಟಕ" ಮತ್ತು "ವಿಜಯವಾಣಿ" ಪತ್ರಿಕೆಗಳಿಗೆ
ಪ್ರಾಯೋಗಿಕ ಭೇಟಿ ನೀಡಿದ್ದರು. ನಂತರ [illegible] [illegible]
ವಿಜಯ ಕರ್ನಾಟಕ ಪತ್ರಿಕೆಗೂ ಕೂಡ ನಮ್ಮನ್ನು [illegible]
ಅಭ್ಯಾಸಕ್ಕಾಗಿ ಕರೆದುಕೊಂಡು ಹೋದರು.

ಅಲ್ಲಿ ನಾವು ಪತ್ರಿಕೆಯ ಸ್ಥಾನಿಕ
ಸಂಪಾದಕರನ್ನು ಮೊದಲು ಭೇಟಿ ಮಾಡಿ ಅಲ್ಲಿನ ಸಿಬ್ಬಂದಿಗಳನ್ನು
ಪರಿಚಯಿಸಿಕೊಂಡು ಪತ್ರಿಕೆಯ ಒಂದೊಂದು ಹಂತಗಳನ್ನು
ತಿಳಿಯುತ್ತ ಹೋದೆವು. ಈ ಮೊದಲು ಸ್ವಲ್ಪ ಮಟ್ಟಿಗೆ
ಸೀಮಿತವಾದ ನಮ್ಮ ಅಧ್ಯಯನ ಆ ಪತ್ರಿಕೆಯ ಮೂಲಕ
ಪ್ರಾಯೋಗಿಕ ಅಧ್ಯಯನವನ್ನು ತಿಳಿಸಿತು.

ಹಾಗೆ, ಅವರು
ನಮಗೆ ಪತ್ರಿಕೆಯನ್ನು ರಚಿ ಮಾಡುವ ವಿಧಾನವನ್ನು ತಿಳಿಸಿದರು.
ಅದನ್ನು ಯಾವ ರೀತಿಯಾಗಿ ತಯಾರಿಸುತ್ತಾರೆ ಎಂಬುವುದನ್ನು
ಸಂಪೂರ್ಣವಾಗಿ ತಿಳಿಸಿಕೊಟ್ಟರು. ಹಾಗೆ ಒಂದು ಪತ್ರಿಕೆಯ ಮಹತ್ವ
ಮತ್ತು ಅದರ ಜವಾಬ್ದಾರಿ ಬಗ್ಗೆ ಎಲ್ಲಿ ವಿದ್ಯಾರ್ಥಿಗಳಿಗೆ
ತಿಳಿಸಿಕೊಡುತ್ತಾ, ಒಂದು ಪತ್ರಿಕೆಯಲ್ಲಿ ದೃಶ್ಯ ಕೂಡ ಅತ್ಯಂತ
ಪ್ರಾಮುಖ್ಯತೆ ಪಡೆದಿರುತ್ತದೆ.

ಅಲ್ಲದೆ ಇಂದು ಅತೀ ಹೆಚ್ಚು ಪ್ರಬಲವಾಗಿ ಬೆಳೆದಿರುವುದು
ಪತ್ರಿಕೆ ಹಾಗೂ "ಮಾಧ್ಯಮ ರಂಗ" ಏಕೆಂದರೆ ಪತ್ರಿಕೆಯು ದಿನನಿತ್ಯ
ಓದುಗರಿಗೆ ಸುದ್ದಿಯನ್ನು ಮುಟ್ಟಿಸುವಂತಹ ಕಾರ್ಯವಾಗಿದೆ. ಎಲ್ಲರು
ಮುಂಜಾನೆ ಎದ್ದು ಪತ್ರಿಕೆಯನ್ನು ಓದದಿದ್ದರೆ ಏನನ್ನು

Cont...

Scanned with CamScanner

ಕಳೆದುಕೊಂಡಂತೆ ಅವರೆಗೆ ಭಾಸವಾಗುವುದು. ಒಂದು ಗ್ಲಾಸ್ ಬಿಸಿ-ಬಿಸಿ ಚಹ್ ಜೊತೆ ಪತ್ರಿಕೆಯನ್ನು ಓದುತ್ತಿದ್ದರೆ ಆ ಮಜಾನೆ ಬೇರೆ.

ಒಬ್ಬ ವ್ಯಕ್ತಿಯು ತನ್ನ ದಿನವನ್ನು ಆರಂಭಿಸುವುದು ಪತ್ರಿಕೆ ಓದುವುದರ ಮೂಲಕ ಅಥವಾ ಮಾಧ್ಯಮ, ದೂರದರ್ಶನ ನೋಡುವುದರ ಮೂಲಕ ಆರಂಭಿಸುತ್ತಾನೆ. ಪತ್ರಿಕೆಯು ಎಷ್ಟೊಂದು ಪ್ರಮುಖವಾದ ಪಾತ್ರವನ್ನು ಹೊಂದಿದೆ ಎಂದು ನಾವು ತಿಳಿದುಕೊಳ್ಳಬಹುದು.

ಮಾಧ್ಯಮದಿಂದ ನಾವು ಒಳ್ಳೆಯ ವಿಷಯಗಳನ್ನು ಮತ್ತು ಕೆಟ್ಟ ವಿಷಯಗಳನ್ನು ಕಲಿಯುತ್ತೇವೆ. ಮಾಧ್ಯಮ ಎನ್ನುವಂತಹದು ಒಂದು ಚೂಪಾದ ಚಾಕು ಇದ್ದಂತೆ ಇದನ್ನು ಒಳ್ಳೆಯದಕ್ಕೆ ಮಾತ್ರ ಬಳಸಬೇಕು. ಹಾಗಾಗಿ ಮಾಧ್ಯಮದಿಂದ ನಾವು ಒಳ್ಳೆಯದನ್ನು ಮಾತ್ರ ಕಲಿತುಕೊಳ್ಳಬೇಕು.

ಇಂದು ನಾವು "ವಿಜಯಪುರ" ದಲ್ಲಿ ಇರುವಂತಹ "ವಿಜಯಕರ್ನಾಟಕ" ಪತ್ರಿಕಾ ಕಛೇರಿಗೆ ಬೇಟಿ ನೀಡಿದೆವು, ಅಲ್ಲಿ ಮೊದಲಿಗೆ ನಾವು ಆ ಪತ್ರಿಕೆಯ ಮುಖ್ಯಸ್ಥರನ್ನು ಭೇಟಿ ಮಾಡಿ, ಅವರಿಂದ ವಿಷಯಗಳನ್ನು ಸಂಗ್ರಹಿಸಿದೆವು, ಅವರು ನಮಗೆ ಯಾವ ರೀತಿಯಾಗಿ ಪತ್ರಿಕೆಯು ಯಾವ ರೀತಿಯಾಗಿ ತಯಾರಾಗುತ್ತದೆ ಮತ್ತು ವರದಿಗಾರರು ಯಾವ ರೀತಿಯಾಗಿ ವರದಿ ಮಾಡುತ್ತಾರೆ ಎಂಬುದರ ಬಗ್ಗೆ ಸಂಪೂರ್ಣವಾಗಿ ಮಾಹಿತಿ ತಿಳಿಸಿಕೊಟ್ಟರು.

ಪತ್ರಿಕೆ ಮತ್ತು ಮಾಧ್ಯಮಗಳು ಇರದಿದ್ದರೆ ಗಾಳಿ ಇಲ್ಲದೆ ಉಸಿರಾಡಿದ ಹಾಗೆ ಆಗುತ್ತದೆ. ಜನರಿಗೆ ಅಷ್ಟೊಂದು ಹತ್ತಿರವಾಗಿವೆ, ಈ ಪತ್ರಿಕೆಗಳು ಮತ್ತು ಮಾಧ್ಯಮಗಳು ಜನರ ಜೀವಾಳು ಎಂದರೆ ತಪ್ಪಾಗುವುದಿಲ್ಲ. ನಾನು ಜೀವನದಲ್ಲಿ "ಪತ್ರಿಕೋದ್ಯಮ" ವಿಷಯವನ್ನು

Cont --

Scanned with CamScanner

ಆಯ್ಕೆಮಾಡಿಕೊಂಡು ಒಂದು ಒಳ್ಳೆಯ ಕೆಲಸ ಮಾಡಿದ್ದೇನೆ. ಏಕೆಂದರೆ ಪತ್ರಿಕೋದ್ಯಮದಿಂದ ಜೀವನ ರೂಪಿಸಿಕೊಳ್ಳುವದರ ಜೊತೆಗೆ ಜನರಿಗೆ ಹತ್ತಿರವಾಗಿ ಅವರ ಸಮಸ್ಯೆಗಳನ್ನು ತಿಳಿದುಕೊಂಡು ಬಗೆಹರಿಸುವಂತಹ ಕೆಲಸ ಈ ಪತ್ರಿಕೋದ್ಯಮದಿಂದ ಸಾಧ್ಯ.

ಅದೇ ರೀತಿ ವರದಿಗಾರರ ಜೀವನ ಅಷ್ಟೊಂದು ಸುರಕ್ಷಿತವಲ್ಲ. ಏಕೆಂದರೆ ವರದಿಗಾರರು ವರದಿ ಮಾಡುತ್ತ ಯಾವ ಸ್ಥಳಕ್ಕೆ ಬೇಕಾದರೂ ಹೋಗುವಂತ ಸನ್ನಿವೇಷ ಉದ್ಭವವಾಗಬಹುದು. ಎಂತಹ ದೊಡ್ಡ ಅಪಾಯಕಾರಿ ಸ್ಥಳಕ್ಕೆ ಬೇಕಾದರೂ ಹೋಗುವದಕ್ಕೆ ತಯಾರಿರಬೇಕಾಗುತ್ತದೆ, ವರದಿಗಾರರ ಜೀವನ ತುಂಬಾ ಕಷ್ಟಕರವಾಗಿರುತ್ತದೆ.

ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳು ಸಂವಿದಾನದ ಮೂರು ಪ್ರಮುಖ ಅಂಗಗಳಾಗಿವೆ ಹಾಗೆಯೇ ಪತ್ರಿಕೋದ್ಯಮವನ್ನು ಸಂವಿಧಾನದ ನಾಲ್ಕನೇ ಅಂಗವೆಂದು ಪರಿಗಣಿಸಲಾಗಿದೆ. ನಾನು ಕೂಡ ಒಬ್ಬ ಪತ್ರಕರ್ತನಾಗಿ ತೊಂದರೆಗಳನ್ನು ಎದುರಿಸಿ ಸಮಾಜದ ಸುಧಾರನೆಯತ್ತ ಮುನ್ನುಗ್ಗಿ ಒಳ್ಳೆಯ ಪತ್ರಕರ್ತನಾಗಬೇಕೆಂಬ ಆಸೆ ಮತ್ತು ಗುರಿ ನನ್ನದು.

ವರದಿಗಾರ ವರದಿ ಮಾಡಿದರೆ, ಉಪ ಸಂಪಾದಕ ಅದರಲ್ಲಿರುವ ದೋಷಗಳನ್ನು ತಪ್ಪುಗಳನ್ನು ಸರಿ ಮಾಡಿ ಒಂದು ಸುಂದರವಾದ ರೂಪ ನೀಡಿ ಅಂದ-ಚೆಂದದ ಪುಟ ತಯಾರಿಸಿ ಅದನ್ನು ಮುದ್ರಣಕ್ಕೆ ಕಳುಹಿಸುತ್ತಾನೆ. ಪತ್ರಿಕೆಯ ಮಾರುವ ಹುಡುಗರು ಅದನ್ನು ಓದುಗರ ಮುಂದೆ ಇಡುತ್ತಾರೆ.

ಒಂದು ಪತ್ರಿಕೆ ಓದುಗರ ಮುಂದೆ ಇಡುವುದರ ಹಿಂದೆ ನೂರಾರು ಜನರ ಪರಿಶ್ರಮವಿರುತ್ತದೆ. ಪತ್ರಿಕೆ ಓದುಗರ

Cont...

Scanned with CamScanner

ಮುಂದೆ ಇಡಲು ಸಾಧ್ಯ. ಒಂದು ಪತ್ರಿಕೆ ತಯಾರಾಗಬೇಕಾದರೆ ಬಹಳಷ್ಟು ಜನರ ಶ್ರಮವಿದ್ದಾಗ ಮಾತ್ರ ಓದುಗರಿಗೆ ಪತ್ರಿಕೆಯನ್ನು ಮುಟ್ಟಿಸಲು ಸಾಧ್ಯ. ಇದರಿಂದ ಓದುಗರಿಗೆ ಜಗತ್ತಿನ ಆಗುಹೋಗುಗಳ ಬಗ್ಗೆ ಸಂಪೂರ್ಣ ಮಾಹಿತಿ ದೊರೆತಂತಾಗುತ್ತದೆ. ಜನರಿಗೆ ಎಲ್ಲಾ ಮಾಹಿತಿ ತಲುಪಿದಾಗ ಮಾತ್ರ ವರದಿಗಾರರಿಗೆ ನಿರಾಳ. ಒಟ್ಟಿನಲ್ಲಿ ಪ್ರಾಯೋಗಿಕ ಭೇಟಿಗೆ ಅವಕಾಶ ಕಲ್ಪಿಸಿದ ಉಪನ್ಯಾಸಕರಿಗೂ ಪ್ರಾಚಾರ್ಯರಿಗೂ ಚಿರಋಣಿ.

ರಾಹುಲ್ ಗುದಿಗೆನ್ನವರ
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಬಿ.ಎ. ಐದನೇ ಸೆಮಿಸ್ಟರ್

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಲೇಖನಗಳ ತಯಾರಿಕೆ



ಅಡಿಬರಹ: ವಿಜಯ-ಕರ್ನಾಟಕ ಸಿಬ್ಬಂದಿಗಳೊಂದಿಗೆ ಬಿ.ಎಲ್.ಡಿ.ಇ. ಸಂಸ್ಥೆಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳು.

ನಮ್ಮ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರಾದ ಶ್ರುತಿ ಮೇಡಂ. ಪ್ರಾಚಾರ್ಯರ ಅನುಮತಿ ಮೇರೆಗೆ ಒಂದು ಸಾರಿ ಪ್ರಾಯೋಗಿಕ ಭೇಟಿಗೆಂದು ವಿಜಯಪುರದ ವಿಜಯ ಕರ್ನಾಟಕ ಪತ್ರಿಕೆಗೆ ನಮ್ಮನ್ನೆಲ್ಲ ಕರೆದುಕೊಂಡು ಹೋಗಿದ್ದರು.

ಮಾಧ್ಯಮ ಲೋಕಕ್ಕೆ ಭೇಟಿ ಕೊಟ್ಟಾಗ ಅದರ ಅಂತರಾಳವನ್ನು ತಿಳಿದುಕೊಂಡೆ. ಪತ್ರಕರ್ತರ ಒಂದೊಂದು ಸುದ್ದಿಯಲ್ಲಿ ಸಾಮಾಜಿಕ ಹೊಣೆಗಾರಿಕೆ ಇರುವುದನ್ನು

Cont...

Scanned with CamScanner

ನಾವು ಕಂಡುಕೊಂಡೆವು. ನಾವು ಕೂಡ ಇಂತಹ ವರದಿಗಾರಿಕೆಯಲ್ಲಿ ತೊಡಗಿಕೊಳ್ಳಬೇಕೆಂದರು. ಈ ಮೊದಲು ನಮ್ಮ ಶಿಕ್ಷಕರು ವರದಿಗಾರಿಕೆ ಬಗ್ಗೆ ಹೇಳಿದ್ದರು. ನಾವು ಕೂಡ ಅಲ್ಪ-ಸ್ವಲ್ಪ ಬರವಣಿಗೆಯನ್ನು ಕಲಿತು ಪತ್ರಿಕೆಗಳಿಗೂ ಸಾಕಷ್ಟು ಲೇಖನಗಳನ್ನು ಬರೆಯುತ್ತಿದ್ದೆವು.

ಒಂದು ಸುಂದರವಾದ ಪತ್ರಿಕೆ ನೋಡಲು ಕಣ್ಣಿಗೆ ಚೆಂದ. ಓದಲು ಕೂಡ ತುಂಬಾ ಇಷ್ಟ ಆದರೆ ಒಂದು ಪತ್ರಿಕೆಯನ್ನು ತಯಾರಿಸಲು ಅಲ್ಲಿ ಸಾವಿರಾರು ಜನರ ಪರಿಶ್ರಮದ ಫಲವಿರುವುದು. ವರದಿಗಾರರು ವರದಿ ಮಾಡಿದರೆ. ಉಪಸಂಪಾದಕರು ಅದರಲ್ಲಿ ದೋಷಗಳನ್ನು ಸರಿಪಡಿಸಿ ಸುಂದರ ತಲೆಬರಹ ನೀಡಿ. ಅಚ್ಚು ಕಟ್ಟಾಗಿ ಸುದ್ದಿಯನ್ನು ತಯಾರಿಸಿ ಮುದ್ರಣಕ್ಕೆ ಕಳುಹಿಸುತ್ತಾರೆ.

ಮಾರನೇ ದಿನ ಪತ್ರಿಕೆಯನ್ನು ನೋಡಿದಾಗ ಇಡೀ ಪುಟ ಬಣ್ಣಗಳಿಂದ ಕಂಗೊಳಿಸುತ್ತಿರುತ್ತದೆ, ಹಾಗೆ ಜಾಹಿರಾತುಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ. ಆಗಿನ ಕಾಲದ ಪತ್ರಿಕೆಗಳಲ್ಲಿ ಜಾಹೀರಾತುಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಸುದ್ದಿಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಆಗ ಪತ್ರಿಕೆಗಳು ಕಷ್ಟಕಾಲದಲ್ಲಿಯೂ ಇದ್ದವು. ಜೈಲಿನಲ್ಲಿದ್ದುಕೊಂಡೆ ಗಾಂಧೀಜಿ ಅವರು ಪತ್ರಿಕೆಗಳಿಗೆ ಲೇಖನಗಳನ್ನು ಸಹ ಬರೆಯುತ್ತಿರುವುದು ಹಿಂದಿನ ಇತಿಹಾಸ. ಆದರೆ ಇಂದಿನ ಪತ್ರಿಕೆಗಳನ್ನು ನಾವು ನೋಡಿದಾಗ ಕಲರ್ ಫುಲ್ಲಾಗಿರುವುದನ್ನು ಕಾಣಬಹುದು.

ಸುದ್ದಿಗಳಿಗೆ ತಕ್ಕಂತೆ ಕಾಲಂಗಳನ್ನು ತಯಾರಿಸಿ ಯಾವ ಸುದ್ದಿಗೆ ಎಷ್ಟು ಜಾಗ ಬೇಕೆಂಬುದನ್ನು ಸಹ ಅವರ ಕಂಡುಕೊಂಡಿರುತ್ತಾರೆ. ಅದೇ ರೀತಿ ಸುದ್ದಿಗಳಿಗೆ ತಕ್ಕಂತೆ ಸ್ಥಳಾವಕಾಶವನ್ನು ಅವರು ಕಲ್ಪಿಸಿರುತ್ತಾರೆ. ಹೀಗೆ ಪತ್ರಿಕೋದ್ಯಮದಲ್ಲಿ

Cont....

Scanned with CamScanner

ಸಾಕಷ್ಟು ಜನ ಕೆಲಸಗಾರರಿದ್ದು ಒಮದಿಮದು ಕೆಲಸವನ್ನು ಒಬ್ಬಬ್ಬೂರು ಮಾಡುವರು. ವರದಿಗಾರಿಕೆ ವಿಭಾಗ. ಸಂಪಾದಕೀಯ ವಿಭಾಗ. ಜಾಹೀರಾತು ವಿಭಾಗ. ಹೀಗೆ ಅಲ್ಲಿ ಎಲ್ಲ ವಿಭಾಗಗಳನ್ನು ನಾವು ನೋಡಬಹುದು. ಪತ್ರಿಯೊಂದಕ್ಕೂ ಪ್ರತಿ ವಿಭಾಗಗಳನ್ನು ನಾವು ಕಾಣುತ್ತೇವೆ.

ಇನ್ನೂ ಸ್ಥಾನಿಕ ಸಂಪಾದಕರು ಮುದ್ರಣಕ್ಕೂ ಹೋಗುವ ಮುನ್ನ ಎಲ್ಲವನ್ನು ಪರಿಶೀಲಿಸಿ ಪತ್ರಿಕೆಯನ್ನು ಮುದ್ರಣಕ್ಕೆ ಕಳುಹಿಸುತ್ತಾರೆ. ಪೋಟೋಗ್ರಫಿ ಒಂದು ಪೋಟೋ ಸಾವಿರ ಪದಗಳಿಗೆ ಸಮವಾಗಿರುತ್ತದೆ. ಗ್ರಾಮೀಣ ಭಾಗದ ಜನರು ಇಂತಹ ಪೋಟೋಗಳನ್ನು ಗುರುತಿಸುವುದರ ಮೂಲಕ ಸುದ್ದಿಗಳನ್ನು ಗ್ರಹಿಸುತ್ತಾರೆ. ಗ್ರಾಮೀಣ ವರದಿಗಾರಿಕೆಗೆ ನಾವು ಕಟಿಮ ಮಹತ್ವವನ್ನು ಕೊಡುತ್ತಿರುವುದನ್ನು ಕಾಣಬಹುದಾಗಿದೆ.

ಪತ್ರಿಕೋದ್ಯಮದಲ್ಲಿ ಇತ್ತಿಚೇಗೆ ಸಾಕಷ್ಟು ಬೆಳವಣಿಗೆ ಆಗಿರುವುದನ್ನು ಸಹ ನಾವು ಕಾಣಬಹುದಾಗೆ. ಪತ್ರಿಕೋದ್ಯಮ ನಿಂತ ನೀರಲ್ಲ ಯಾವಾಗಲು ಸ್ವಚಂದವಾಗಿ ಹರಿಯುತ್ತಿರಯವ ಸ್ವಚ್ಛ ನೀರು. ನಾನು ಕೂಡ ಮೊದಮೊದಲು ಪತ್ರಿಕೋದ್ಯಮ ವಿಷವನ್ನು ತೆಗೆದುಕೊಳ್ಳಲು ಹಿಂದೇಟು ಹಾಕಿದ್ದರು ನಂತರ ಇಷ್ಟಪಟ್ಟು ಕಲಿಯುತ್ತಿದೆ. ಸಣ್ಣ-ಸಣ್ಣ ಲೇಖನಗಳನ್ನು ಕೂಡ ಪತ್ರಿಕೆಗಳಿಗೆ ಕಳುಹಿಸುತ್ತೇನೆ. ವಿಷಯದ ಆಳವನ್ನು ನಾವು ತಿಳಿಯುತ್ತ ಹೋದರೆ ಅದು ತುಂಬಾ ವಿಶಾಲತೆಯನ್ನು ಪಡೆದಿರುವುದು ತಿಳಿಯುತ್ತದೆ.

ಪರಶುರಾಮ ಅಳಲದಿನ್ನಿ
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಬಿ.ಎ. ಐದನೇ ಸೆಮಿಸ್ಟರ್


Principal,
S.B. Arts and KCP Science College
VIJAYA...

IQAC, Co-ordinator
S.B.Arts & K.C.P.Science College,
Vijayapur.

Head of Department
Journalism & Mass Commu...
S.B.Arts & K.C.P Science C...
Vijayapur

Scanned with CamScanner

# ಸುದ್ದಿ ಸಂಪಾದನೆ ಚಾಕಚಕ್ಯತೆ



ಅಡಿಬರಹ: ಸುದ್ದಿಯನ್ನು ಸಂಪಾದಿಸುತ್ತಿರುವುದನ್ನು ವಿಕ್ಷೀಸುತ್ತಿರುವ ದೃಶ್ಯ

ಸಮೂಹ ಸಂಹನ ಮತ್ತು ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿ ಶ್ರುತಿ ಚಿನಗುಂಡಿ. ಅವರು ಪತ್ರಿಕೋದ್ಯಮ ವಿದ್ಯಾರ್ಥಿಗಳನ್ನೆಲ್ಲ, ಒಂದು ದಿನ ವಿಜಯಪುರದಲ್ಲಿರುವ ವಿಜಯ ಕರ್ನಾಟಕ ಪತ್ರಿಕೆಗೆ ಪ್ರಾಯೋಗಿಕ ಭೇಟಿಗೆಂದು ನಮ್ಮನ್ನೆಲ್ಲ ಕೆರದುಕೊಂಡು ವಿಕ ಕಛೇರಿಗೆ ಹೋದರು.

ವಿಜಯ ಕರ್ನಾಟಕ ಕಛೇರಿಗೆ ಭೇಟಿ ನೀಡಿದಾಗ ಅಲ್ಲಿಯ ಸ್ಥಾನಿಕ ಸಂಪಾದಕರು ವರದಿಗಾರರು. ನಮ್ಮನ್ನೆ

Cont---

Scanned with CamScanner

ಆತ್ಮೀಯತೆಯಿಂದ ಬರಮಾಡಿಕೊಂಡರು. ಪತ್ರಿಯಲ್ಲಿ ಯಾವ ಸುದ್ದಿಗಳನ್ನು ಯಾವ ಪುಟಗಳಿಗೆ ಕಳುಹಿಸಬೇಕು. ಸುದ್ದಿಯನ್ನು ಹೇಗೆ ಬರೆಯಬೇಕು ಎಂಬೆಲ್ಲ ಮಾಹಿತಿಯನ್ನು ತಿಳಿಸಿಕೊಟ್ಟರು. ಪತ್ರಿಕೋದ್ಯಮ ವಿಷಯದ ಬಗ್ಗೆ ಆಸಕ್ತಿಯಿಂದ ಬಂದ ನನಗೆ ನನ್ನ ಆಸಕ್ತಿಯನ್ನು ಇನ್ನಷ್ಟು ಇಮ್ಮಡಿಯಾಗುವಂತೆ ಮಾಡಿದ ವಿಭಾಗದ ಉಪನ್ಯಾಸಕರಿಗೆ ಧನ್ಯವಾದಗಳು.

ವರದಿಗಾರಿಕೆ ವಿಷಯಕ್ಕೆ ಬಂದರೆ ಯಾವ ವಿಷಯದ ಬಗ್ಗೆ ವರದಿ ಮಾಡುತ್ತಾನೊ, ಆ ವಿಭಾಗಕ್ಕೆ ಅವನು ಸುದ್ದಿಯನ್ನು ಪ್ರತಿನಿತ್ಯ ಕಳುಹಿಸಬೇಕು. ಉದಾ: ವಿಜಯಪುರ ಜಿಲ್ಲೆಯ ಸುದ್ದಿಯನ್ನು ದಿನಾಲೂ ಉಪಸ ಂಪಾದಕನಿಗೆ ಮುಟ್ಟಿಸುವುದು ಆಯಾ ಜಿಲ್ಲೆಯ ಜಿಲ್ಲಾ ವರದಿಗಾರ ಸುದ್ದಿಯನ್ನು ಕೊಡಬೇಕಾಗುತ್ತದೆ.

ಗ್ರಾಮೀಣ ವರದಿಗಾರಿಕೆ, ಕ್ರೀಡಾ ವರದಿಗಾರಿಕೆ, ಸಿನಿಮಾ ವರದಿಗಾರಿಕೆ, ರಾಜಕೀಯ ವರದಿಗಾರಿಕೆ, ಹೀಗೆ ದೊಡ್ಡ-ದೊಡ್ಡ ಬಿರೋಗಳಲ್ಲಿ ಎಲ್ಲ ವಿಭಾಗಗಳನ್ನು ನಾವು ಕಾಣಬಹುದು. ಆಯಾ ವಿಭಾಗಕ್ಕೆ ತಕ್ಕಂತೆ ಆಯಾ ವರದಿಗಾರರಿರೂವುದನ್ನು ನಾವು ಕಾನಬಹುದು.

ಅದೇ ರೀತಿ ಪೇಜ್‌ಗಳ ಒಂದು ವಿಷಯಕ್ಕೆ ಬಂದ್ರೆ, ಯಾವ ಪೇಜ್‌ಗೆ ಯಾವ ಸುದ್ದಿಯನ್ನು ಕಳುಹಿಸಬೇಕೆಂಬ ಗ್ರಹಿಕೆಯು ಕೂಡ ತುಂಬಾ ಮಹತ್ವದ್ದಾಗಿರುತ್ತದೆ. ಅದೇ ರೀತಿ ಪೇಜ್ ಡಿಸೈನ ಕೂಡ ಪ್ರಮುಖವಾದಂತಹ ಪ್ರಾತವನ್ನು ವಹಿಸುವುದುಂಟು. ಇತ್ತಿಚೇನ ದಿನಗಳಲ್ಲಿ ಪುಟಗಳಲ್ಲಿ

Cont ...

Scanned with CamScanner

ಗ್ರಾಫಿಕ್ಸ್ ಕೂಡ ಬಳಸುವುದನ್ನು ನಾವು ಕಾಣುತ್ತೇವೆ. ವಿಶೇಷ ಪುಟಗಳನ್ನು ತಯಾರಿಸಬೇಕಾದರೆ ಗ್ರಾಫಿಕ್ಸ್ ನ್ನು ಬಳಸುತ್ತಾರೆ.

ಪುಟದ ಅಂದ-ಚೆಂದ ಹೆಚ್ಚಿಸುವ ಬಣ್ಣಗಳು ಇಂದು ಜನರ ಮನಸ್ಸನ್ನು ಕೂಡ ಆಕರ್ಷಿಸಿವೆ. ಒಟ್ಟಿನಲ್ಲಿ ಈ ಪತ್ರಿಕೋದ್ಯಮ ವಿಷಯದಿಂದ ಕಲಿಬೇಕಾಗಿರುವ ಮಾಹಿತಿ ಯಂತೂ ತುಂಬಾನೇ ಅಗಾಧವಾದುದು. ಆಗಿರುವುದುಂಟು. ಅಲ್ಲಿರುವಂತಹ ಇನ್‌ಡಿಸೈನ ಸಾಫ್ಟ್‌ವೇರ್. ಪೋಟೋ ಶಾಫ್ ಬಗ್ಗೆ ಸಮಗ್ರವಾದಂತಹ ಮಾಹಿತಿಯನ್ನು ನಾವು ತಿಳಿದುಕೊಂಡೆವು. ಪಠ್ಯಕ್ಕೆ ಸಿಮೀತವಾಗಿದ್ದ ನಾವು ಅಂದು ಪ್ರಾಯೋಗಿಕ ವಿಷಯಗಳನ್ನು ತಿಳಿದುಕೊಂಡೆವು ಎಂಬ ಖುಷಿ ನಮ್ಮದು. ವಿಭಾಗದ ಪ್ರಾಧ್ಯಾಪಕರಿಗೂ ಪ್ರಾಚಾರ್ಯರಿಗೆ ನಾವು ಚಿರಋಣಿ. ಒಟ್ಟಿನಲ್ಲಿ ಪತ್ರಿಕೋದ್ಯಮ ವಿಷಯದ ಆಯ್ಕೆ ನನ್ನ ನೆಚ್ಚಿನದು.

V.B. ChoPade

**ವಿಜಯಲಕ್ಷ್ಮೀ ಚೋಪಡೆ,**

**ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ**

**ಬಿ.ಎ. ಐದನೇ ಸೆಮಿಸ್ಟರ್**

Shruti Chingundi

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

| Name of the Students | Roll NO | Register NO | Sign |
|---|---|---|---|
| Vijayalaxmi. B. chopade. | 02 | A1650336 | V.B. Chopade |
| Parashuram. S. Alaladinni | 94 | A1650265 | [signature] |
| Rahul. M. Gudigenavar | 25 | A1650278 | R.m. Gudigenavar |

Shruti Chingundi

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner